# ನೃತ್ಯಕ್ಕೆ ಸಾಹಿತ್ಯವೇ ಅಂತರ್ಜಲ

ಭರತನಾಟ್ಯ, ಕೂಚಿಪುಡಿ ಮತ್ತು ವಿಲಾಸಿನಿ ನಾಟ್ಯಪ್ರಕಾರಗಳ ಕಲಾವಿದೆಯಾಗಿ, ಸಂಶೋಧಕಿಯಾಗಿ ಗುರುತಿಸಿಕೊಂಡಿರುವ ಹೈದರಾಬಾದ್ ನಿವಾಸಿ, ಗುರು ಅನುಪಮಾ ದೇವಿ ಕೈಲಾಶ್ ಅವರು ಭಕ್ತಿಮಾರ್ಗದ ಕುರಿತು ಸಂಶೋಧನೆ ನಡೆಸಿದವರು. 'ವಿಶ್ವಂನಾರಾಯಣಂ', 'ಭಕ್ತಿಮಾರ್ಗಂ', 'ಶಿವಾರ್ಪಣ', 'ಜೀವ ನಾಯಿಕಾ', 'ಜಯಮಂಗಲಗಾಥಾ' ಶೀರ್ಷಿಕೆಗಳಲ್ಲಿ ಅಪ್ರತಿಮವಾದ ನೃತ್ಯರೂಪಕಗಳನ್ನು ಪ್ರಸ್ತುತಪಡಿಸಿ ಕಲಾಕ್ಷೇತ್ರದ ಗಮನ ಸೆಳೆದವರು. ವಾಗ್ಗೇಯಕಾರರಾದ ಅಣ್ಣಮಾಚಾರ್ಯ ಮತ್ತು ಕ್ಷೇತ್ರಯ್ಯ ಕವಿಗಳ ಸಾಹಿತ್ಯದಲ್ಲಿ ನಾಯಿಕೆಯರ ಪ್ರಸ್ತುತಿಯ ಕುರಿತು ಅಧ್ಯಯನ ನಡೆಸಿ ಡಾಕ್ಟರೇಟ್ ಪಡೆದಿದ್ದಾರೆ. ದಕ್ಷಿಣ ಮತ್ತು ಪೂರ್ವಭಾರತ ಪ್ರದೇಶದಲ್ಲಿ ಹರಡಿಕೊಂಡಿರುವ ನೃತ್ಯಸಾಹಿತ್ಯದ ಅಧ್ಯಯನ ನಡೆಸಿ, ಹೊಸತಲೆಮಾರಿನ ಕಲಾವಿದರಿಗೆ ಮಾರ್ಗದರ್ಶನ ಮಾಡಿದ್ದಾರೆ. ಕೂಚಿಪುಡಿ ಮತ್ತು ವಿಲಾಸಿನಿ ನಾಟ್ಯ ಕಲಾವಿದೆ ಎಂದು ಗುರುತಿಸಿಕೊಂಡಿದ್ದರೂ ಈಗ ತಾವು ಪ್ರಸ್ತುತಪಡಿಸುವ ನೃತ್ಯವನ್ನು 'ಅಭಿನಯ' ಎಂದು ಕರೆಯಲು ಇಚ್ಛಿಸುತ್ತಾರೆ. 'ನೃತ್ಯಕಲೆಯಲ್ಲಿ ಇತ್ತೀಚೆಗಿನ ದಶಕಗಳಲ್ಲಿ ಹಲವು ಶೈಲಿ–ವಿಭಾಗಗಳಿವೆ. ಆದರೆ ಅವೆಲ್ಲವೂ ಒಂದೇ ತಾಯಿಬೇರಿನ ವಿವಿಧ ಟಿಸಿಲುಗಳಂತೆ' ಎನ್ನುವುದು ಅವರ ಗ್ರಹಿಕೆ. ನೃತ್ಯಪ್ರಕಾರಗಳ ಸಮಗ್ರ ಕಲಿಕಾ ವಿಧಾನವನ್ನು ಬಲವಾಗಿ ಪ್ರತಿಪಾದಿಸುವ ಅವರು, ದೇಶ ವಿದೇಶಗಳ ಪ್ರತಿಷ್ಠಿತ ವೇದಿಕೆಗಳಲ್ಲಿ ನೃತ್ಯ ಪ್ರದರ್ಶನ ನೀಡಿದ್ದಾರೆ. ಅನುಪಮಾ ದೇವಿ ಅವರೊಡನೆ ನಡೆಸಿದ ಮಾತುಕತೆಯ ಆಯ್ದ ಭಾಗ 'ಮಯೂರ' ಓದುಗರಿಗಾಗಿ ಇಲ್ಲಿದೆ.

**ಕೋಡಿಬೆಟ್ಟು ರಾಜಲಕ್ಷ್ಮಿ**

**◆ ನೃತ್ಯ ಕಲಿಕೆ ಮತ್ತು ಅಧ್ಯಯನದ ಈ ಪಯಣ ಶುರುವಾದ ಬಗೆ ಹೇಗೆ?**

ನನ್ನ ಆರಂಭಿಕ ಕಲಿಕೆ ಭರತನಾಟ್ಯದೊಂದಿಗೆ. ಗುರು ಜಯಲಕ್ಷ್ಮಿ ನಾರಾಯಣನ್ ಅವರ ಬಳಿ ಭರತನಾಟ್ಯವನ್ನು ಕಲಿಯುತ್ತಿರುವಾಗ, ನನಗೆ ನನ್ನ ನಾಡಿನ ಕಲಾಪ್ರಕಾರಗಳು ಮತ್ತು ಅವುಗಳ ಹಿನ್ನೆಲೆ ಮುನ್ನೆಲೆಗಳನ್ನು ಕಲಿಯುವ ಮನಸ್ಸಾಯಿತು. ಹಾಗಾಗಿ ಕೂಚಿಪುಡಿ ನೃತ್ಯದ ಕಡೆಗೆ ಗಮನ ಹೊರಳಿತು. ಆದರೆ ಈ ಕ್ಷೇತ್ರದಲ್ಲಿ ಪುರುಷ ಗುರುಗಳದ್ದೇ ಪಾರಮ್ಯ ಗಮನಿಸಿ, ಮಹಿಳೆಯೊಬ್ಬರಿಂದ ಈ ನೃತ್ಯವನ್ನು ಕಲಿಯುವುದಕ್ಕೆ ಮುಂದಾದೆ. ಗುರು ಉಮಾ ರಮಾ ರಾವ್ ಅವರಿಂದ ಕೂಚಿಪುಡಿ ಕಲಿಯುತ್ತಿದ್ದಂತೆಯೇ ಈ ನೃತ್ಯ ಪ್ರಕಾರಗಳಿಗೆ ಪೂರಕವಾಗಿರುವ ಶ್ರೀಮಂತವಾದ ಸಾಹಿತ್ಯ ಪರಂಪರೆಯು ಹೇಗೆ ಬೆಳೆದು ಬಂದಿದೆ ಎಂದು ಅರಿತುಕೊಳ್ಳಬೇಕು ಎನಿಸಿತು. ನೃತ್ಯದೊಡನೆ ನಾವು ಹಾಡುವ, ಕೇಳುವ ಸಂಗೀತ ಪರಂಪರೆಯು ಅಪಾರ ವೈವಿಧ್ಯದಿಂದ ಕೂಡಿದೆ. ದಾಸ ಸಾಹಿತ್ಯ, ಭಕ್ತಿ ಸಂಗೀತ, ಭಾಗವತ ಪರಂಪರೆ, ಯಕ್ಷಗಾನ – ಹೀಗೆ ಸಂಗೀತ ಲೋಕದ ವ್ಯಾಪ್ತಿಯನ್ನು ಕಂಡು ಮನಸೋಲದವರಿಲ್ಲ. ಆದ್ದರಿಂದ ನಾನು ಸಾಹಿತ್ಯ ಅಧ್ಯಯನದತ್ತ ಗಮನ